2014

II sem — F + R

**MS – 365**

# II Semester B.Com. Examination, May/June 2014
## (2012-13 and Onwards) (Fresh + Repeaters)
## COMMERCE
## Paper – 2.3 : Advanced Financial Accounting

Time : 3 Hours    Max. Marks : 100

***Instruction :*** *Answers should be written* ***completely*** *either in* ***English*** *or in* ***Kannada****.*

SECTION – A

Answer **any ten** sub-questions. **Each** sub-question carries **two** marks. **(10×2=20)**

1. a) State any two reasons why Accounting Standards are needed.
   b) State any two objectives of Accounting Standards Board.
   c) What is over insurance ?
   d) Why is memorandum trading account prepared ?
   e) Who is consignor ?
   f) Give the meaning of account sales.
   g) What is over-riding commission ?
   h) State any two differences between joint venture and consignment.
   i) State the methods of accounting for Joint ventures.
   j) What are independent branches ?
   k) What is invoice price method ?
   l) What is meant by inland branches ?

SECTION – B

Answer **any four** questions. **Each** question carries **eight** marks. **(4×8=32)**

2. Briefly explain the significance of accounting standards.

3. On June 10, 2013 a fire occurred in the premises of Mr. Amar and a considerable amount of stock was destroyed. The accounting records that were saved from fire disclosed the following particulars.

| **Particulars** | **Rs.** |
| --- | --- |
| Stock on 1/1/2012 | 1,50,000 |
| Stock on 31/12/2012 | 1,80,000 |
| Purchases for the year 2012 | 8,00,000 |
| Sales for the year 2012 | 11,00,000 |
| Purchases from 1/1/2013 to 10/6/2013 | 3,50,000 |
| Sales from 1/1/2013 to 10/6/2013 | 4,80,000 |
| Stock salvaged | 14,000 |
| Policy amount | 2,50,000 |

Find out the amount of claim to be made.

4. Bhaskar consigns 1,200 units of a product costing Rs. 300 each to Chandan. He incurs Rs. 6,000 for carriage expenses. 60 units of the product are stolen in transit. Chandan receives the remaining goods, and sells 1,020 units at Rs. 460 per unit. Expenses incurred by him amounted to Rs. 4,260, the entire amount being non-recurring. He reports a normal loss of 24 units. Find the value of abnormal loss and closing stock.

5. Deepa and Eswari entered into a joint venture to purchase stationeries and supply them to colleges. They agreed to share profits in the ratio of 5 : 3 and to maintain books of accounts for the joint venture under Memorandum Joint Venture Method.

   Deepa and Eswari purchased stationeries for Rs. 6,00,000 and Rs. 4,50,000 respectively and sold them for Rs. 7,50,000 and Rs. 5,25,000 respectively. Selling expenses incurred by them are Rs. 35,000 and Rs. 25,000 respectively. No goods remained unsold and the final amount is settled by cheque.

   Prepare necessary accounts in the books of Deepa.

6. Fortune Ltd., has its head office at Bengaluru and a branch at Hassan. It closes the books of accounts on 31st March every year. Pass adjustment entries in the books of head office for the following :

   a) Goods worth Rs. 3,00,000 sent by head office on 25th March, 2014 were received by the branch on 5th April, 2014.

   b) Depreciation at 15% p.a. is to be provided on Furniture costing Rs. 3,50,000 installed on 1st August, 2013 at Hassan. The furniture A/c is maintained at head office.

   c) Hassan branch collected Rs. 18,500 from a local customer and Rs. 12,500 interest on investments on behalf of the head office.

   d) A clerk of the branch rendered services in the head office for a period of 3 months and his salary per month is Rs. 12,000.

## SECTION – C

Answer **any three** questions. **Each** question carries **sixteen** marks. **(3×16=48)**

7. Fire occurred in the premises of George on 1st August, 2013. A considerable part of the stock was destroyed and the stock salvaged was Rs. 94,800. From the following particulars find out the amount of claim.

   Value of insurance policy Rs. 2,40,000

   Stock on 1st April 2013 Rs. 2,92,800

   Purchases from 1st April 2013 to the date of fire Rs. 8,76,000

   Sales from 1st April 2013 to the date of fire Rs. 11,64,000

   Purchases during 2012-13 Rs. 18,42,000

   Sales during 2012-13 Rs. 23,58,000

   Stock on 1st April 2012 Rs. 2,22,000.

Stock on 1st April 2012 included a special item valued at Rs. 67,200 which was sold at a profit of 25% on cost. A part of this item was sold during 2012-13 while the balance was sold on 20th May 2013 for Rs. 30,000. Except for this item, the rate of gross profit on all other items was uniform throughout the period.

8. Hamsa sends 70,000 units of a product at Rs. 40 each to Indira on consignment basis and incurs Rs.16,000 on freight and Rs.14,500 on agents commission. On receipt of goods Indira accepts a bill drawn by Hamsa for Rs. 6,00,000 for 3 months and at the end of the accounting year, she sends account sales showing the following details :

   Sales – 60,000 units at an average price of Rs. 58 each.

   Normal loss – 2% of the goods consigned.

   Expenses incurred – Unloading charges Rs. 14,000; Carriage inwards Rs. 15,000; Carriage outwards 12,500 and Godown Rent Rs. 13,500.

   Indira is entitled for a commission of 5% on total sales. The final balance due to Hamsa is settled by Bank Draft.

   Pass journal entries and prepare necessary ledger accounts in the books of Hamsa.

9. Jayanth, Kumar and Lakshman entered into Joint Venture and agreed to share profits and losses in the ratio of their capital contributions. They contributed Rs. 2,50,000, Rs. 1,50,000 and Rs. 1,00,000 respectively into the Joint Bank Account.

   The purchases and sales were as follows :

   Credit purchases from A Ltd., Rs. 5,00,000

   Credit purchases from B Ltd., Rs. 3,00,000

   Cash purchases from C Ltd., Rs. 4,00,000

   Cash sales Rs. 9,00,000

   Credit sales to C Ltd., Rs. 6,50,000.

   Office expenses Rs. 30,000. The unsold goods were taken over by Kumar at an agreed value of Rs. 20,000. Lakshman is entitled to a special commission of 5% on gross sales. All balances were settled through Joint Bank Account at the end.

   **Prepare :**

   a) Joint Venture A/c
   b) Joint Bank A/c
   c) A Ltd., A/c
   d) B Ltd., A/c
   e) C Ltd., A/c and
   f) Co-ventures' A/c.

10. Nischal Traders has a branch at Mysore. Goods are sent from the head office at cost plus 25%. The branch also purchases goods independently from local parties for which payment is made by the branch itself out of its collections. The branch is advised to deposit cash periodically into head office bank account. From the following particulars prepare Mysore Branch A/c in the books of head office for the period ending 31st March, 2014.

| Particulars | Rs. | Particulars | Rs. |
|---|---|---|---|
| Balances as at 1st April 2013 | | Discount allowed by branch | |
| Branch petty cash | 20,000 | to debtors | 20,000 |
| Branch debtors | 2,50,000 | Cash received by branch | |
| Branch furniture | 4,00,000 | from debtors | 12,50,000 |
| Branch stock | | Branch salary and rent paid | |
| – Goods sent by head office | 2,40,000 | by head office | 30,000 |
| – Direct purchases | 1,60,000 | Petty expenses paid by | |
| Cash sales | 4,50,000 | branch manager | 35,000 |
| Credit sales | 13,00,000 | Balances as at 31st March 2014 | |
| Direct purchases | 4,50,000 | Branch petty cash | ? |
| Returns from customers to branch | 30,000 | Branch debtors | ? |
| Goods sent to branch at invoice | | Branch furniture | ? |
| price | 6,00,000 | Branch stock – | |
| Cash sent to branch for petty | | – Goods sent by head office | 1,80,000 |
| expenses | 25,000 | – Direct purchases | 1,20,000 |
| Bad debts at the branch | 10,000 | | |

Provide depreciation on branch furniture at 10% per annum.

## ಕನ್ನಡ ಆವೃತ್ತಿ

### ವಿಭಾಗ – ಎ

ಯಾವುದಾದರೂ ಹತ್ತು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೂ ಎರಡು ಅಂಕಗಳು. **(10×2=20)**

1. ಅ) ಲೆಕ್ಕಶಾಸ್ತ್ರದ ನಿರ್ದಿಷ್ಟಮಾನಗಳು ಏಕೆ ಬೇಕೆಂಬುದಕ್ಕೆ ಯಾವುದಾದರೂ ಎರಡು ಕಾರಣಗಳನ್ನು ನೀಡಿ.

   ಆ) ಲೆಕ್ಕಾಚಾರದ ನಿರ್ದಿಷ್ಟಮಾನಗಳ ಮಂಡಳಿಯ ಯಾವುದಾದರೂ ಎರಡು ಉದ್ದೇಶಗಳನ್ನು ನೀಡಿ.

   ಇ) ಮೇರೆಮೀರಿದ ವಿಮೆ ಎಂದರೇನು ?

   ಈ) ಮೆಮೊರ್‍ಯಾಂಡಮ್ ವ್ಯಾಪಾರ ಖಾತೆಯನ್ನು ಏಕೆ ತಯಾರಿಸಲಾಗುವುದು ?

   ಉ) ಸರಕು ಕಳಿಸುವಾತ ಎಂದರೆ ಯಾರು ?

ಊ) ಮಾರಾಟ ಲೆಕ್ಕಪತ್ರದ ಅರ್ಥ ನೀಡಿ (Account sales).

ಋ) ಹೆಚ್ಚುವರಿ ದಲ್ಲಾಳಿ ಎಂದರೇನು ?

ಎ) ಜಂಟಿ ವ್ಯವಹಾರಿಕೆ ಹಾಗೂ ಸರಕು ಕಳಿಸುವಿಕೆ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

ಏ) ಜಂಟಿ ವ್ಯವಹಾರಿಕೆಯಲ್ಲಿ ಬಳಸಲ್ಪಡುವ ಲೆಕ್ಕಾಚಾರದ ವಿಧಾನಗಳನ್ನು ಬರೆಯಿರಿ.

ಐ) ಸ್ವತಂತ್ರ ಶಾಖೆಗಳು ಯಾವುವು ?

ಒ) ಮಾರಾಟ ಬೆಲೆ ವಿಧಾನ ಎಂದರೇನು ?

ಓ) ಒಳನಾಡು ಶಾಖೆಗಳು ಎಂದರೇನು ?

## ವಿಭಾಗ – ಬಿ

ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ ಪ್ರಶ್ನೆಗೂ ಎಂಟು** ಅಂಕಗಳು. **(4×8=32)**

2. ಲೆಕ್ಕಾಚಾರದ ನಿರ್ದಿಷ್ಟಮಾನಗಳ ಪ್ರಾಮುಖ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

3. ಜೂನ್ 10, 2013 ರಂದು ಅಮರ್‌ರವರ ಪ್ರಾಂಗಣದಲ್ಲಿ ಬೆಂಕಿ ಸಂಭವಿಸಿ ಸಾಕಷ್ಟು ಪ್ರಮಾಣದ ಸರಕು ಹಾನಿಯಾಯಿತು. ಹಾನಿಯಿಂದ ಉಳಿದುಕೊಂಡ ಲೆಕ್ಕಪತ್ರಗಳು ಕೆಳಕಂಡ ವಿವರಗಳನ್ನು ತೋರಿಸಿವೆ.

| **ವಿವರಗಳು** | **ರೂ.** |
|---|---|
| ದಾಸ್ತಾನು 1/1/2012 ರಂದು | 1,50,000 |
| ದಾಸ್ತಾನು 31/12/2012 ರಂದು | 1,80,000 |
| 2012 ರಲ್ಲಿ ಖರೀದಿ | 8,00,000 |
| 2012 ರಲ್ಲಿ ಮಾರಾಟ | 11,00,000 |
| 1/1/2013 ರಿಂದ 10/6/2013 ರವರೆಗೆ ಖರೀದಿ | 3,50,000 |
| 1/1/2013 ರಿಂದ 10/6/2013 ರವರೆಗೆ ಮಾರಾಟ | 4,80,000 |
| ಹಾನಿಯಿಂದ ಉಳಿದುಕೊಂಡ ಸರಕು | 14,000 |
| ವಿಮಾ ಪಾಲಿಸಿ ಮೊತ್ತ | 2,50,000 |

ವಿಮಾ ಕ್ಲೇಮ್ ಮೊತ್ತ ಕಂಡುಹಿಡಿಯಿರಿ.

4. ಭಾಸ್ಕರ್‌ರವರು ಪ್ರತಿಯೊಂದು ಪದಾರ್ಥಕ್ಕೆ ರೂ. 300 ರಂತೆ 1,200 ಪದಾರ್ಥಗಳನ್ನು ಚಂದನ್ ರವರಿಗೆ ಕನ್‌ಸೈನ್ ಮಾಡುತ್ತಾರೆ. ಅವರು ರೂ. 6,000 ಸಾರಿಗೆಗಾಗಿ ವ್ಯಯಿಸಿದರು. 60 ಪದಾರ್ಥಗಳು ಸಾರಿಗೆ ಸಮಯದಲ್ಲಿ ಕಳುವಾದವು. ಉಳಿದ ಸರಕುಗಳನ್ನು ಪಡೆದುಕೊಂಡ ಚಂದನ್‌ರವರು ರೂ. 460 ಕ್ಕೆ ಒಂದರಂತೆ 1,020 ಪದಾರ್ಥಗಳನ್ನು ಮಾರಾಟ ಮಾಡಿದರು. ಅವರು ವ್ಯಯಿಸಿದ ಒಂದೇ ಬಾರಿಯ ಮೊತ್ತ ರೂ. 4,260. ಅವರು 24 ಪದಾರ್ಥಗಳು ಸಾಮಾನ್ಯ ನಷ್ಟವೆಂದು ವರದಿ ಮಾಡುತ್ತಾರೆ. ಅಸಾಮಾನ್ಯ ನಷ್ಟ ಹಾಗೂ ಅಂತಿಮ ದಾಸ್ತಾನುಗಳ ಮೌಲ್ಯ ಕಂಡುಹಿಡಿಯಿರಿ.

5. ದೀಪಾ ಮತ್ತು ಈಶ್ವರಿ ಲೇಖನ ಸಾಮಗ್ರಿಗಳ ಖರೀದಿ ಹಾಗೂ ಅವುಗಳನ್ನು ಕಾಲೇಜುಗಳಿಗೆ ಸರಬರಾಜು ಮಾಡುವ ಜಂಟಿ ವ್ಯವಹಾರಿಕೆ ಒಡಂಬಡಿಕೆ ಮಾಡಿಕೊಂಡರು. ಲಾಭವನ್ನು5 :3 ಪ್ರಮಾಣದಲ್ಲಿ ಹಂಚಿಕೊಳ್ಳುವುದು ಹಾಗೂ ಲೆಕ್ಕ ಪುಸ್ತಕಗಳನ್ನು ಮೆಮೊರ್‍ಯಾಂಡಂ ಜಂಟಿ ವ್ಯವಹಾರ ವಿಧಾನದಲ್ಲಿ ಇಟ್ಟುಕೊಳ್ಳುವುದಾಗಿ ಒಪ್ಪಿಕೊಂಡರು. ದೀಪಾ ಮತ್ತು ಈಶ್ವರಿ ಕ್ರಮವಾಗಿ ರೂ. 6,00,000 ಹಾಗೂ ರೂ. 4,50,000 ಮೌಲ್ಯದ ಲೇಖನ ಸಾಮಗ್ರಿಗಳ ಖರೀದಿ ಮಾಡಿದರು ಹಾಗೂ ಅವುಗಳನ್ನು ರೂ. 7,50,000 ಹಾಗೂ ರೂ. 5,25,000 ಕ್ಕೆ ಮಾರಾಟ ಮಾಡಿದರು. ಅವರು ವ್ಯಯಿಸಿದ ಮಾರಾಟ ವೆಚ್ಚ ಕ್ರಮವಾಗಿ ರೂ. 35,000 ಹಾಗೂ ರೂ. 25,000. ಯಾವುದೇ ಸರಕು ಮಾರಾಟವಾಗದೇ ಉಳಿದುಕೊಂಡಿಲ್ಲ ಮತ್ತು ಅಂತಿಮ ಮೊತ್ತ ಚೆಕ್ ಮುಖಾಂತರ ಕೊನೆಗೊಳಿಸಿಕೊಂಡರು. ಅಗತ್ಯ ಖಾತೆಗಳನ್ನು ದೀಪಾಳ ಪುಸ್ತಕಗಳಲ್ಲಿ ತಯಾರಿಸಿ.

6. ಫಾರ್ಚುನ್ ಲಿ. ತನ್ನ ಕೇಂದ್ರ ಕಛೇರಿಯನ್ನು ಬೆಂಗಳೂರಿನಲ್ಲಿ ಹಾಗೂ ಶಾಖೆಯನ್ನು ಹಾಸನದಲ್ಲಿ ಹೊಂದಿದೆ. ಅದು ಪ್ರತಿ ವರ್ಷ ಮಾರ್ಚ್ 31 ಕ್ಕೆ ತನ್ನ ಲೆಕ್ಕ ಪುಸ್ತಕಗಳನ್ನು ಕೊನೆಗೊಳಿಸುತ್ತದೆ. ಕೆಳಕಂಡವುಗಳಿಗೆ ಕೇಂದ್ರ ಕಛೇರಿಯ ಪುಸ್ತಕಗಳಲ್ಲಿ ಹೊಂದಾಣಿಕೆ ಎಂಟ್ರಿಗಳನ್ನು ಬರೆಯಿರಿ.

ಅ) 25 ಮಾರ್ಚ್ 2014 ರಂದು ಕೇಂದ್ರ ಕಛೇರಿ ಕಳುಹಿಸಿದ ರೂ. 3,00,000 ಮೌಲ್ಯದ ಸರಕು 5 ಎಪ್ರಿಲ್ 2014 ರಂದು ಶಾಖೆಯಲ್ಲಿ ಸ್ವೀಕರಿಸಲ್ಪಟ್ಟಿತು.

ಆ) 1 ಆಗಸ್ಟ್ 2013 ರಲ್ಲಿ ಹಾಸನ ಶಾಖೆಯಲ್ಲಿ ಇಡಲಾದ ರೂ. 3,50,000 ವೆಚ್ಚದ ಪೀಠೋಪಕರಣಗಳ ಮೇಲೆ ವಾರ್ಷಿಕ 15% ನಂತೆ ಸವಕಳಿ ತೆಗೆಯಬೇಕಾಗಿದೆ. ಪೀಠೋಪಕರಣಗಳ ಖಾತೆಯನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿದೆ.

ಇ) ಕೇಂದ್ರ ಕಛೇರಿಯ ಪರವಾಗಿ ಸ್ಥಳೀಯ ಗ್ರಾಹಕರೊಬ್ಬರಿಂದ ಹಾಸನ ಶಾಖೆಯು ರೂ. 18,500 ಸಂಗ್ರಹಿಸಿದೆ ಹಾಗೂ ಹೂಡಿಕೆಗಳ ಮೇಲೆ ರೂ. 12,500 ಬಡ್ಡಿ ಸ್ವೀಕರಿಸಿದೆ.

ಈ) ಶಾಖೆಯ ಗುಮಾಸ್ತನೊಬ್ಬನು 3 ತಿಂಗಳ ಕಾಲ ಕೇಂದ್ರ ಕಛೇರಿಯಲ್ಲಿ ಸೇವೆ ಸಲ್ಲಿಸಿರುತ್ತಾನೆ ಹಾಗೂ ಆತನ ಮಾಸಿಕ ಸಂಬಳ ರೂ. 12,000 ಆಗಿದೆ.

## ವಿಭಾಗ – ಸಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೂ **ಹದಿನಾರು** ಅಂಕಗಳು. **(3×16=48)**

7. 1 ಆಗಸ್ಟ್ 2013 ರಂದು ಜಾರ್ಜ್‌ರವರ ಪ್ರಾಂಗಣದಲ್ಲಿ ಬೆಂಕಿ ಸಂಭವಿಸಿತು. ಸಾಕಷ್ಟು ಪ್ರಮಾಣದ ಸರಕು ಹಾನಿಯಾಯಿತು ಹಾಗೂ ಹಾನಿಯಿಂದ ಉಳಿದುಕೊಂಡ ಸರಕು ರೂ. 94,800. ಕೆಳಕಂಡ ವಿವರಗಳಿಂದ ಕ್ಲೇಮ್ ಮೊತ್ತ ಕಂಡುಹಿಡಿಯಿರಿ.

ವಿಮಾ ಪಾಲಿಸಿ ಮೊತ್ತ ರೂ. 2,40,000

1 ಎಪ್ರಿಲ್ 2013 ರಂದು ದಾಸ್ತಾನು ರೂ. 2,92,800

1 ಎಪ್ರಿಲ್ 2013 ರಿಂದ ಬೆಂಕಿ ಸಂಭವಿಸಿದ ದಿನಾಂಕದವರೆಗೆ ಖರೀದಿ ರೂ. 8,76,000

1 ಎಪ್ರಿಲ್ 2013 ರಿಂದ ಬೆಂಕಿ ಸಂಭವಿಸಿದ ದಿನಾಂಕದವರೆಗೆ ಮಾರಾಟ ರೂ. 11,64,000

2012-13 ರಲ್ಲಿ ಖರೀದಿ ರೂ. 18,42,000

2012-13 ರಲ್ಲಿ ಮಾರಾಟ ರೂ. 23,58,000

1 ಎಪ್ರಿಲ್ 2013 ರಂದು ದಾಸ್ತಾನು ರೂ. 2,22,000.

1 ಎಪ್ರಿಲ್ 2012 ರಂದು ದಾಸ್ತಾನು ರೂ. 67,200 ಮೌಲ್ಯದ ಒಂದು ವಿಶೇಷ ವಸ್ತುವನ್ನು ಒಳಗೊಂಡಿದ್ದು, ಅದು ವೆಚ್ಚದ ಮೇಲೆ 25% ಲಾಭದಂತೆ ಮಾರಾಟವಾಗುತ್ತಿತ್ತು. ಇದರ ಒಂದು ಭಾಗ 2012-13 ರಲ್ಲಿ ಮಾರಾಟವಾಗಿದ್ದು, ಉಳಿದದ್ದು 20 ಮೇ 2013 ರಂದು ರೂ. 30,000 ಕ್ಕೆ ಮಾರಾಟವಾಗಿದೆ. ಇದನ್ನು ಹೊರತುಪಡಿಸಿ ಉಳಿದ ಎಲ್ಲಾ ವಸ್ತುಗಳ ಮೇಲೂ ಒಟ್ಟು ಲಾಭ ದರ ನಿರಂತರವಾಗಿ ಒಂದೇ ರೀತಿ ಇದೆ.

8. ಹಂಸ 70,000 ಪದಾರ್ಥಗಳನ್ನು ಪ್ರತಿಯೊಂದಕ್ಕೆ ರೂ. 40 ರಂತೆ ಇಂದಿರಾಗೆ ಕನ್‌ಸೈನ್‌ಮೆಂಟ್ ಒಪ್ಪಂದದಡಿ ಕಳುಹಿಸುತ್ತಾರೆ ಹಾಗೂ ರೂ. 16,000 ಸಾರಿಗೆ ವೆಚ್ಚ ಮತ್ತು ರೂ. 14,500 ಏಜೆಂಟ್ ಕಮಿಷನ್‌ಗಾಗಿ ವ್ಯಯಿಸುತ್ತಾರೆ. ಸರಕುಗಳ ಸ್ವೀಕೃತಿ ಸಂದರ್ಭದಲ್ಲಿ ಇಂದಿರಾ ರೂ. 6,00,000 ಕ್ಕೆ 3 ತಿಂಗಳ ವಾಯಿದೆ ಬಿಲ್ಲನ್ನು ಒಪ್ಪಿಕೊಳ್ಳುತ್ತಾರೆ ಮತ್ತು ವರ್ಷಾಂತ್ಯದಲ್ಲಿ ಕೆಳಕಂಡ ವಿವರಗಳುಳ್ಳ ಅಕೌಂಟ್ ಸೇಲ್ಸ್ ಅನ್ನು ಕಳುಹಿಸುತ್ತಾರೆ.

ಮಾರಾಟ – 60,000 ಪದಾರ್ಥಗಳು ಪ್ರತಿಯೊಂದಕ್ಕೂ ಸರಾಸರಿ ರೂ. 58 ರಂತೆ.

ಸಾಮಾನ್ಯ ನಷ್ಟ – ಸರಕು ರವಾನೆಯ 2%

ವ್ಯಯಿಸಿದ ವೆಚ್ಚಗಳು – ಸರಕು ಇಳಿಸಿಕೊಳ್ಳಲು ರೂ. 14,000; ಒಳಸಾರಿಗೆ ರೂ. 15,000; ಹೊರಸಾರಿಗೆ ರೂ. 12,500 ಮತ್ತು ಉಗ್ರಾಣದ ಬಾಡಿಗೆ ರೂ. 13,500.

ಇಂದಿರಾರವರು ಒಟ್ಟು ಮಾರಾಟದ ಮೇಲೆ 5% ಕಮಿಷನ್‌ಗೆ ಅರ್ಹರಾಗಿರುತ್ತಾರೆ. ಹಂಸರವರಿಗೆ ಅಂತಿಮ ಶಿಲ್ಕು ಬ್ಯಾಂಕ್ ಡ್ರಾಫ್ಟ್ ಮುಖಾಂತರ ತೀರುವಳಿ ಮಾಡಲಾಗುತ್ತದೆ.

ಹಂಸರವರ ಪುಸ್ತಕಗಳಲ್ಲಿ ದಿನಚರಿ ಪುಸ್ತಕದಲ್ಲಿ ದಾಖಲೆ ಬರೆದು ಅಗತ್ಯ ಖಾತೆಗಳನ್ನು ತಯಾರಿಸಿ.

9. ಜಯಂತ್, ಕುಮಾರ್ ಮತ್ತು ಲಕ್ಷ್ಮಣ್ ಜಂಟಿ ವ್ಯವಹಾರಿಕೆಗೆ ಪ್ರವೇಶಿಸುತ್ತಾರೆ ಮತ್ತು ಲಾಭ ನಷ್ಟಗಳನ್ನು ತಮ್ಮ ಬಂಡವಾಳ ಕೊಡುಗೆಯ ಪ್ರಮಾಣದಲ್ಲಿ ಹಂಚಿಕೊಳ್ಳಲು ಒಪ್ಪಿಕೊಳ್ಳುತ್ತಾರೆ. ಅವರು ಕ್ರಮವಾಗಿ ರೂ. 2,50,000, ರೂ. 1,50,000 ಮತ್ತು ರೂ. 1,00,000 ವನ್ನು ಜಂಟಿ ಬ್ಯಾಂಕ್ ಖಾತೆಗೆ ಹಾಕುತ್ತಾರೆ.

ಖರೀದಿ ಮತ್ತು ಮಾರಾಟ ಕೆಳಕಂಡಂತಿವೆ :

ಉದ್ದರಿ ಖರೀದಿ ಎ ಲಿಮಿಟೆಡ್ ನಿಂದ ರೂ. 5,00,000

ಉದ್ದರಿ ಖರೀದಿ ಬಿ ಲಿಮಿಟೆಡ್ ನಿಂದ ರೂ. 3,00,000

ನಗದು ಖರೀದಿ ಸಿ ಲಿಮಿಟೆಡ್ ನಿಂದ ರೂ. 4,00,000

ನಗದು ಮಾರಾಟ ರೂ. 9,00,000

ಉದ್ದರಿ ಮಾರಾಟ ಸಿ ಲಿಮಿಟೆಡ್‌ಗೆ ರೂ. 6,50,000.

ಕಛೇರಿ ವೆಚ್ಚಗಳು ರೂ. 30,000. ಮಾರಾಟವಾಗದೆ ಉಳಿದ ಪದಾರ್ಥಗಳನ್ನು ಕುಮಾರ್ ಒಪ್ಪಿತ ಮೌಲ್ಯ ರೂ. 20,000 ಕ್ಕೆ ತೆಗೆದುಕೊಂಡರು. ಲಕ್ಷ್ಮಣ್ ಒಟ್ಟು ಮಾರಾಟದ ಮೇಲೆ 5% ವಿಶೇಷ ಕಮಿಷನ್‌ಗೆ ಅರ್ಹರಾಗಿರುತ್ತಾರೆ. ಎಲ್ಲಾ ಶಿಲ್ಕುಗಳು ಕೊನೆಯಲ್ಲಿ ಜಂಟಿ ಬ್ಯಾಂಕ್ ಖಾತೆ ಮೂಲಕ ತೀರುವಳಿಯಾಗುತ್ತವೆ.

**ತಯಾರಿಸಿ :**

ಅ) ಜಂಟಿ ವ್ಯವಹಾರಿಕ ಖಾತೆ

ಆ) ಜಂಟಿ ಬ್ಯಾಂಕ್ ಖಾತೆ

ಇ) ಎ ಲಿಮಿಟೆಡ್ ಖಾತೆ

ಈ) ಬಿ ಲಿಮಿಟೆಡ್ ಖಾತೆ

ಉ) ಸಿ ಲಿಮಿಟೆಡ್ ಖಾತೆ

ಊ) ಜಂಟಿ ವ್ಯವಹಾರಸ್ಥರ ಖಾತೆ.

10. ನಿಶ್ಚಲ್ ಟ್ರೇಡರ್ಸ್‌ನ ಒಂದು ಶಾಖೆ ಮೈಸೂರಿನಲ್ಲಿದೆ. ಕೇಂದ್ರ ಕಛೇರಿಯಿಂದ ಸರಕುಗಳು ವೆಚ್ಚದ ಮೇಲೆ ಶೇ. 25 ರಂತೆ ಮಾರಾಟ ಬೆಲೆಯಲ್ಲಿ ರವಾನಿಸಲ್ಪಡುತ್ತವೆ. ಶಾಖೆಯು ಸ್ಥಳೀಯರಿಂದಲೂ ಸ್ವತಂತ್ರವಾಗಿ ಸರಕು ಖರೀದಿಸಿ ತಾನು ಸಂಗ್ರಹಿಸಿದ ಹಣದಿಂದಲೇ ಪಾವತಿಯನ್ನೂ ಮಾಡುತ್ತದೆ. ಶಾಖೆಯು ನಗದು ಹಣವನ್ನು ಆಗಿಂದಾಗ್ಗೆ ಕೇಂದ್ರ ಕಛೇರಿಯ ಬ್ಯಾಂಕ್ ಖಾತೆಗೆ ಜಮೆ ಮಾಡಲು ಸೂಚಿಸಲ್ಪಟ್ಟಿದೆ. ಕೆಳಕಂಡ ವಿವರಗಳಿಂದ ಕೇಂದ್ರ ಕಛೇರಿಯ ಪುಸ್ತಕದಲ್ಲಿ 31 ಮಾರ್ಚ್ 2014 ಕ್ಕೆ ಅಂತ್ಯಗೊಳ್ಳುವಂತೆ ಮೈಸೂರು ಶಾಖೆಯ ಖಾತೆಯನ್ನು ತಯಾರಿಸಿ.

| ವಿವರಗಳು | ರೂ. | ವಿವರಗಳು | ರೂ. |
|---|---|---|---|
| 1ನೇ ಎಪ್ರಿಲ್ 2013 ರಲ್ಲಿದ್ದಂತೆ ಶಿಲ್ಕು | | ಶಾಖೆಯು ಋಣಿಗಳಿಗೆ ನೀಡಿದ ರಿಯಾಯಿತಿ | 20,000 |
| ಶಾಖಾ ಚಿಲ್ಲರೆ ನಗದು | 20,000 | ಶಾಖೆಯು ಋಣಿಗಳಿಂದ ಸ್ವೀಕರಿಸಿದ ನಗದು | 12,50,000 |
| ಶಾಖಾ ಋಣಿಗಳು | 2,50,000 | ಶಾಖೆಯ ಸಂಬಳ ಮತ್ತು ಬಾಡಿಗೆ ಕೇಂದ್ರ ಕಛೇರಿಯಿಂದ ಪಾವತಿಸಿದ್ದು | 30,000 |
| ಶಾಖಾ ಪೀಠೋಪಕರಣಗಳು | 4,00,000 | ಶಾಖೆಯ ವ್ಯವಸ್ಥಾಪಕರು ಪಾವತಿಸಿದ ಚಿಲ್ಲರೆ ಖರ್ಚುಗಳು | 35,000 |
| ಶಾಖಾ ದಾಸ್ತಾನು | | 31ನೇ ಮಾರ್ಚ್ 2014 ರಲ್ಲಿದ್ದಂತೆ ಶಿಲ್ಕು | |
| – ಕೇಂದ್ರ ಕಛೇರಿಯಿಂದ ರವಾನಿಸಿದ್ದು | 2,40,000 | ಶಾಖಾ ಚಿಲ್ಲರೆ ನಗದು | ? |
| – ನೇರ ಖರೀದಿಸಿದ್ದು | 1,60,000 | ಶಾಖಾ ಋಣಿಗಳು | ? |
| ನಗದು ಮಾರಾಟ | 4,50,000 | ಶಾಖಾ ಪೀಠೋಪಕರಣಗಳು | ? |
| ಉದ್ದರಿ ಮಾರಾಟ | 13,00,000 | ಶಾಖಾ ದಾಸ್ತಾನು – | |
| ನೇರ ಖರೀದಿ | 4,50,000 | – ಕೇಂದ್ರ ಕಛೇರಿಯಿಂದ ರವಾನಿಸಿದ್ದು | 1,80,000 |
| ಗ್ರಾಹಕರು ಶಾಖೆಗೆ ಹಿಂದಿರುಗಿಸಿದ್ದು | 30,000 | – ನೇರ ಖರೀದಿಸಿದ್ದು | 1,20,000 |
| ಶಾಖೆಗೆ ಮಾರಾಟ ಬೆಲೆಯಲ್ಲಿ ಸರಕು ರವಾನಿಸಿದ್ದು | 6,00,000 | | |
| ಶಾಖೆಗೆ ಚಿಲ್ಲರೆ ಖರ್ಚುಗಳಿಗಾಗಿ ನಗದು ರವಾನಿಸಿದ್ದು | 25,000 | | |
| ಶಾಖೆಯ ವಸೂಲಾಗದ ಋಣಗಳು | 10,000 | | |

ಶಾಖಾ ಪೀಠೋಪಕರಣದ ಮೇಲೆ ಸಾಲಿಯಾನ ಶೇ. 10 ಸವಕಳಿ ಒದಗಿಸಿ.

---